ಇಂಜಿನಿಯರ್ಸ್ ಮೇಲೆ ಹೇಳಿದ್ದಾರೆ. ನಾನು corporator ಆಗಿದ್ದೆ, Muncipality member ಆಗಿದ್ದೆ ಮತ್ತು ನಗರಾಭಿವೃದ್ಧಿ ಮಂತ್ರಿಯಾಗಿಯೂ ಸಹ 27 ವರ್ಷಗಳ ಹಿಂದೆ ಕೆಲಸ ಮಾಡಿದ್ದೇನೆ. ಬೆಂಗಳೂರು ನಗರದಲ್ಲಿ ಯಾವ ರೀತಿ ಹಣ misuse ಆಗಿದೆ, ಯಾವ ರೀತಿ ಲೂಟಿ ಮಾಡುತ್ತಿದ್ದಾರೆ ಎಂದರೆ, ಅದಕ್ಕೆ ಮಿತಿಯೇ ಇಲ್ಲ. ಕೇಂದ್ರದಿಂದ ಬಂದಂಥ ಹಣವನ್ನು ನೀರುಪಾಲು ಮಾಡಿದ್ದಾರೆ, ಯಾವುದೇ ಕೆಲಸವಾಗಿಲ್ಲ. ಕೆಲಸಗಳನ್ನು ನೋಡತಕ್ಕಂಥ ರೀತಿಯಲ್ಲಿ ಸದನ ಸಮಿತಿ ಆಗಬೇಕು. ಎರಡನೆಯದಾಗಿ, ನಾವು ಇದನ್ನು C.B.I. ಗೆ ವಹಿಸಬೇಕು ಎಂದು ಏಕೆ ಕೇಳುತ್ತಿದ್ದೇವೆ ಎಂದರೆ infrastructure ಗೆ ಹೆಚ್ಚಿನ ಒತ್ತು ಕೊಡಲು ಕೇಂದ್ರದಿಂದ ಕೊಟ್ಟಂಥ ಹಣವಿದು. ಇದು ತನಖೆಯಾಗಬೇಕು, C.B.I. ತನಖೆಯಿಂದ ಅವ್ಯವಹಾರ ಬಯಲಿಗೆ ಬರುತ್ತದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಧ್ಯಕ್ಷರು: ಒಂದು ಪ್ರಕಟಣೆ ಇದೆ.

5. ಪ್ರಕಟಣೆ

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ದಿನಾಂಕ 07–08–2007 ರಂದು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು 2007ನೇ ಸಾಲಿನ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿರುತ್ತದೆಂದು ತಿಳಿಸಿರುತ್ತಾರೆ.

1) ಚಿಟ್‌ಫಂಡುಗಳ(ಕರ್ನಾಟಕ ತಿದ್ದುಪಡಿ) ವಿಧೇಯಕ

2) ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೇ, ಆರೋಗ್ಯ ಮಂತ್ರಿಗಳಾದ ಅಶೋಕ್‌ರವರು ಬಂದಿದ್ದಾರೆ. ಆರೋಗ್ಯ ಮಂತ್ರಿಗಳು ಬಂದ ತಕ್ಷಣ ಭ್ರೂಣ ಹತ್ಯೆಯ ಬಗ್ಗೆ ಸ್ಟೇಟ್‌ಮೆಂಟ್ ಕೊಡಿಸುತ್ತೇನೆ ಎಂದು ಹೇಳಿದಿರಲ್ಲ. ಅವರು ಬಂದಿದ್ದಾರೆ. ದಯವಿಟ್ಟು ಸ್ಟೇಟ್‌ಮೆಂಟ್ ಕೊಡಿಸಬೇಕು.

ಶ್ರೀ ಧರ್ಮಸಿಂಗ್: ಮಹಾನಗರಪಾಲಿಕೆಯಲ್ಲಿ ಆದಂಥ ಹಣದ ದುರುಪಯೋಗದ ಬಗ್ಗೆ ಈಗಾಗಲೇ ಪ್ರಸ್ತಾಪವಾಗಿದೆ. ಬೆಂಗಳೂರು ನಗರದ